# ಶ್ರೀ ರಾಮಕೃಷ್ಣ ಗೃಹ ನಿರ್ಮಾಣ ಸಹಕಾರ ಸಂಘ ನಿ., (ದಕ್ಷಿಣ)

ಶ್ರೀ ಲಕ್ಷ್ಮಿ ನರಸಿಂಹ ಕಾಂಪ್ಲೆಕ್ಸ್, ನಂ. 40/1, 4ನೇ ಮೇನ್ ರೋಡ್, ವಿ.ವಿ. ಮೊಹಲ್ಲಾ, ಮೈಸೂರು-570 002
ಫೋನ್ ನಂ. : 2411119, 2411130
(ರಿ. ನಂ.-ಎ.ಆರ್. 41/ಎಂಕೆಟಿ/ಆರ್‌ಜಿಎನ್/12232/86-87, ದಿ.26-12-1986)

## ತಿಳುವಳಿಕೆ ಪತ್ರ

ದಿ: 30-05-2016

ಮಾನ್ಯ ಸದಸ್ಯರೇ, _____________

ಸದಸ್ಯತ್ವ ಸಂಖ್ಯೆ ............

**ಕಛೇರಿ ವೇಳೆ: 10.00 ರಿಂದ 2.00**
**4.00 ರಿಂದ 7.00**
**ಭಾನುವಾರ ರಜೆ**

ವಿಷಯ: 2ನೇ ಹಂತ ಕೆ.ಹೆಮ್ಮನಹಳ್ಳಿ/ಹುಯಿಲಾಳು ಬಡಾವಣೆಯ ಅಂತಿಮ ನಿವೇಶನ ಧರ ನಿಗಧಿ ಪಡಿಸಿರುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾವು ಸಂಘವು ಅಭಿವೃದ್ಧಿ ಪಡಿಸುತ್ತಿರುವ 2ನೇ ಹಂತ ಕೆ.ಹೆಮ್ಮನಹಳ್ಳಿ/ಹುಯಿಲಾಳು ಬಡಾವಣೆಯಲ್ಲಿ ನಿವೇಶನಕ್ಕೆ ಅಪೇಕ್ಷಿಪಟ್ಟು, ತಾತ್ಕಾಲಿಕ ದರದ ಅನ್ವಯ ಭಾಗಶ: ಹಣವನ್ನು ಪಾವತಿ ಮಾಡಿರುವುದ್ದು ಸರಿಯಷ್ಟೆ, ಆದರೆ ಸಂಘದಿಂದ ಕೆ.ಹೆಮ್ಮನಹಳ್ಳಿ ಬಡಾವಣೆಯ ನಿವೇಶನದ ಸ್ಥಳಿಯ ಸಂಸ್ಥೆಗಳಿಂದ, ಸರ್ಕಾರದ ಅನುಮತಿಯಂತೆ ಎಲ್ಲಾ ಪ್ರಕ್ರಿಯೇ ಮುಗಿದಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಕ್ಷೆಯು ಅನುಮೋದನೆಗೊಂಡಿದ್ದು, ಆದರಂತೆ ಅಂತಿಮ ದರ ನಿಗಧಿ ಪಡಿಸಲು ಆಡಳಿತ ಮಂಡಳಿಯು ಗುತ್ತಿಗೆದಾರರೊಡನೆ ಮೂರು ಬಾರಿ ಸಭೆ ನಡೆಸಿ ಅವರು ನಿಗದಿ ಪಡಿಸಲು ಹೆಚ್ಚುವರಿಯಾಗಿ ಕೇಳಿರುವಂತಹ ರೂ. 220/- ಗಳನ್ನು ಕಡಿಮೆಗೊಳಿಸಲು ಸತತವಾಗಿ ಪ್ರಯತ್ನಿಸಿ ರೂ. 200/-ಗಳಿಗೆ ಕಡಿಮೆ ಗೊಳಿಸಲಾಯಿತು. ಅದೂ ಸಹ ಆಡಳಿತ ಮಂಡಳಿಯವರಿಗೆ ಈ ಮೊತ್ತವು ಸಹ ಹೆಚ್ಚಳವಾಗಿದೆ, ನಮ್ಮ ಸದಸ್ಯರಿಗೆ ಹೊರೆಯಾಗುತ್ತದೆ ಎಂಬ ಭಾವನೆಯಿಂದ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ, ನಿವೇಶನದಾರ ಸದಸ್ಯರನ್ನು ಸಭೆ ಕರೆದು, ಗುತ್ತಿಗೆದಾರರನ್ನು ಸಭೆಗೆ ಆಹ್ವಾನಿಸಿ, ಸಂಘದ ನೇತೃತ್ವದಲ್ಲಿ ಸದಸ್ಯರೇ ಗುತ್ತಿಗೆದಾರರಲ್ಲಿ ಹೆಚ್ಚಳವಾಗಿರುವ ಬಗ್ಗೆ ಗುತ್ತಿಗೆದಾರರಿಂದ ಮಾಹಿತಿ ಪಡೆದು ಅಂತಿಮವಾಗಿ ದರ ನಿಗಧಿ ಪಡಿಸಿಕೊಳ್ಳಬೇಕೆಂದು, ಸದಸ್ಯರಿಗೆ ತಾ:25/03/2016 ರಂದು "ಶ್ರೀ ನಾದಬ್ರಹ್ಮ ಸಂಗೀತಾ ಸಭಾಂಗಣದಲ್ಲಿ ಬೆಳಿಗ್ಗೆ 10.30 ಗಂಟೆಗೆ ಸದಸ್ಯರಿಗೆ ದರ ನಿಗದಿ ಬಗ್ಗೆ ಚರ್ಚಿಸಲು ಬರುವಂತೆ ಸಂಘದಿಂದ ತಿಳುವಳಿಕೆ ಪತ್ರ ನೀಡಿದ್ದು, ಅದರಂತೆ ಸದಸ್ಯರುಗಳು ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಿದ್ದು, ಹಾಗೂ ಸುಮಾರು 300 ಜನ ಸದಸ್ಯರಷ್ಟು ಹಾಜರಿದ್ದು ಸಭೆಯನ್ನು ನಡೆಸಲಾಯಿತ್ತು. ಸಭೆಯಲ್ಲಿ ಗುತ್ತಿಗೆದಾರರಾದ ಮೆ॥ ಸ್ಕಿಲ್ ಟೆಕ್ ಇಂಜಿನಿಯರ್ ರವರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ. ಶಿವಶಂಕರ್, ನಿರ್ದೇಶಕರಾದ ಶ್ರೀ. ಎಲ್.ಅರುಣ್ ಕುಮಾರ್ ಹಾಗೂ ಶ್ರೀ. ಆರ್. ವೀರೇಶ್ ರವರು ಹಾಗೂ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಹಾಗೂ ಎಲ್ಲಾ ನಿರ್ದೇಶಕರು ಸಭೆಯಲ್ಲಿ ಹಾಜರಿದ್ದರು. ಮತ್ತು ಸಭೆಯನ್ನು ಜ್ಯೋತಿ ಬೆಳಗಿಸುವ ಮೂಲಕ ಸಭೆಯನ್ನು ಪ್ರಾರಂಭವಾಯಿತು.

ಸಂಘದ ಉಪಾಧ್ಯಕ್ಷರಾದ ಡಾ.ಟಿ.ದಯಾನಂದ ಚೌಟ. ರವರು ಸಭೆಯಲ್ಲಿ ಸೇರಿದ ಎಲ್ಲರಿಗೂ ಸ್ವಾಗತ ಸುಸ್ವಾಗತವನ್ನು ಕೋರಿದರು.

ನಂತರ ಅಧ್ಯಕ್ಷರಾದ ಶ್ರೀ.ಎಂ. ಸಂಜೀವ ಶೆಟ್ಟಿ ರವರು ಸಭೆಯಲ್ಲಿ ಸೇರಿದ ಎಲ್ಲಾ ಸದಸ್ಯರಿಗೆ ಸ್ವಾಗತ ಬಯಸುತ್ತಾ, ನಮ್ಮ ಸಂಘದ 2ನೇ ಹಂತ ಕೆ.ಹೆಮ್ಮನಹಳ್ಳಿ ಸದಸ್ಯರುಗಳಿಗೆ ನಿವೇಶನದ ಅಂತಿಮ ದರ ನಿಗದಿ ಪಡಿಸಲು ಈಗಾಗಲೇ ಆಡಳಿತ ಮಂಡಳಿಯು ಮೂರು ಸಭೆಗಳನ್ನು ನಡೆಸಿ ಗುತ್ತಿಗೆದಾರರೊಡನೆ ಸದಸ್ಯರಿಗೆ ಹೊರೆಯಾಗದಂತೆ ದರ ಕಡಿಮೆ ಮಾಡಲು ಪ್ರಾಮಾಣಿಕವಾಗಿ ಮಾಡಿರುವ ಪ್ರಯತ್ನವನ್ನು ಸಭೆಗೆ ತಿಳಿಸಿದರು. ಆದರೆ ಆಡಳಿತ ಮಂಡಳಿಯವರ ಕೋರಿಕೆಗೆ ಸ್ಪಂಧಿಸದೆ ಗುತ್ತಿಗೆದಾರರನ್ನು ಸದಸ್ಯರೊಡನೆ ಚರ್ಚಿಸಲು ಈ ದಿನ ಸಂಘವು ಸದಸ್ಯರಿಗೆ ಅವಕಾಶ ಮಾಡಿಕೊಟ್ಟಿರುತ್ತದೆ. ಅದರಿಂದ ಮಾನ್ಯ ಸದಸ್ಯರುಗಳು ನಮ್ಮ ಗುತ್ತಿಗೆದಾರರ ಮನವೊಲಿಸಿ ತಮಗೆ ಹೊರೆಯಾಗದಂತೆ ದರ ನಿಗದಿ ಪಡಿಸಿಕೊಳ್ಳಬೇಕೆಂದು ಸಭೆಯಲ್ಲಿ ಅಧ್ಯಕ್ಷರು ಮನವಿ ಮಾಡಿಕೊಂಡರು. ಅದರಂತೆ ಗುತ್ತಿಗೆದಾರರಿಗೆ ಅಧ್ಯಕ್ಷರು ನಮ್ಮ ಸದಸ್ಯರಿಗೆ ದರ ಹೆಚ್ಚಳವಾಗುವ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡಿ ಸದಸ್ಯರಿಗೆ ಹೊರೆಯಾಗದಂತೆ ದರ ನಿಗದಿ ಪಡಿಸಿಕೊಡಬೇಕೆಂದು ಗುತ್ತಿಗೆದಾರರಿಗೆ ಮನವಿ ಮಾಡಿಕೊಂಡರು. ಅದರಂತೆ ಗುತ್ತಿಗೆದಾರರಾದ ಶ್ರೀ. ಎಲ್. ಅರುಣ್ ಕುಮಾರ್ ರವರು ಸಭೆಗೆ ದರ ಹೆಚ್ಚಳದ ಬಗ್ಗೆ ಎಳೆ-ಎಳೆಯಾಗಿ ಸಭೆಯ ಸದಸ್ಯರುಗಳಿಗೆ ತಿಳಿಸಿದರು. ಸಭೆಯಲ್ಲಿ ಸೇರಿದ

ಹಲವಾರು ಸದಸ್ಯರುಗಳು ಅವರ ಮಾತಿಗೆ ಕಿವಿಗೊಡದೆ, ಸಭೆಯಲ್ಲಿ ಚರ್ಚಿಸುವ ಸದಸ್ಯರಿಗೂ ಅವಕಾಶ ನೀಡದೆ ಗೊಂದಲವನ್ನು ಉಂಟು ಮಾಡಿದರು. ಅದರೂ ಸಹ ಗುತ್ತಿಗೆದಾರರು ಮತ್ತು ಹಲವಾರು ಸದಸ್ಯರೊಡನೆ ಹಲವಾರು ಚರ್ಚೆಗಳನ್ನು ನಡೆಸಿ, ದರ ನಿಗದಿ ಪಡಿಸುವಲ್ಲಿ ಸಭೆಯು ಗೊಂದಲಕ್ಕೆ ಇಡಾಯಿತು. ನಂತರ ಸಮಯ ಮಧ್ಯಾಹ್ನ 2.00 ಗಂಟೆಯಾಗಿದರಿಂದ ಸಭೆಯನ್ನು ಭೋಜನದ ನಂತರ ಸಭೆ ನಡೆಸಲು ಅಧ್ಯಕ್ಷರು ಮುಂದೂಡಿದರು.

ಭೋಜನದ ನಂತರ ಸಭೆ ಸೇರಿದ ಸದಸ್ಯರುಗಳು ಅಧ್ಯಕ್ಷರು, ಉಪಾಧ್ಯಕ್ಷರು, ಹಾಗೂ ನಿರ್ದೇಶಕರಿಗೆ ಹಲವಾರು ಸದಸ್ಯರ ಗೊಂದಲದಿಂದ ತಾವುಗಳು ಸಭೆಯಲ್ಲಿ ನಡೆದ ಘಟನೆಗೆ ಬೇಸರಗೊಳ್ಳದೆ, ಸದಸ್ಯರುಗಳಿಗೆ ಒಳಿತಾಗುವಂತೆ ಮತ್ತು ಹೊರೆಯಾಗದಂತೆ ಗುತ್ತಿಗೆದಾರರ ಮನವೊಲಿಸಿ ಆಡಳಿತ ಮಂಡಳಿಯ ಸಭೆಯಲ್ಲೇ ಅಂತಿಮ ದರ ತೀರ್ಮಾನಗೊಳಿಸಿ, ಸದಸ್ಯರಿಗೆ ಹೊರೆಯಾಗದಂತೆ ತೀರ್ಮಾನ ಕೈಗೊಳ್ಳಬೇಕೆಂದು ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು. ಮತ್ತು ಸದಸ್ಯರಾದ ಶ್ರೀ.ಜಯಣ್ಣ ಮತ್ತು ಇತರೆ ಸದಸ್ಯರುಗಳು ದರ ನಿಗದಿ ಪಡಿಸುವ ಸಮಯದಲ್ಲಿ ಆಡಳಿತ ಮಂಡಳಿಯು ಈ ಬಡಾವಣೆಗೆ ಸಂಬಂದಪಟ್ಟಂತೆ Chartered Engineer ರವರಿಂದ ಪೂರ್ಣವರದಿ ತರಿಸಿಕೊಂಡು, ಅದರ ಆಧಾರದ ಮೇಲೆ ದರ ನಿಗದಿ ಪಡಿಸಬೇಕೆಂದು ತಿಳಿಸಿದರು. ಆದರಂತೆ ಆಡಳಿತ ಮಂಡಳಿಯು Chartered Engineer ರವರಿಗೆ ಸಂಘದಿಂದ ಪತ್ರ ಬರೆದು, ಸಂಘಕ್ಕೆ ಈ ಬಡಾವಣೆಗೆ ಸಂಬಂಧ ಪಟ್ಟಂತೆ ಪೂರ್ಣ ವಿವರಗಳನ್ನು ತರಸಿಕೊಳ್ಳಲಾಯಿತ್ತು. ಇದರ ಆಧಾರದ ಮೇಲೆ ಗುತ್ತಿಗೆದಾರರೊಡನೆ ದಿನಾಂಕ 30/03/2016, 18/05/2016 ಮತ್ತು 27/05/2016 ರಲ್ಲಿ ಸುಧೀಘವಾಗಿ ಚರ್ಚಿಸಿ ಅವರ ಮನವೊಲಿಸಿ ಗುತ್ತಿಗೆದಾರರು ಕೋರಿದ್ದ ಚದರ ಅಡಿ ಒಂದಕ್ಕೆ ರೂ.220.00 ಗಳ ದರ ಏರಿಕೆಯನ್ನು ಚದರ ಅಡಿ ಒಂದಕ್ಕೆ ರೂ.160.00 ಗಳಿಗೆ ಕಡಿಮೆ ಮಾಡಿಸಲು ಸಂಘವು ಸತತವಾಗಿ ಪ್ರಯತ್ನಿಸಿ ಯಶಸ್ವಿಗೊಂಡಿದೆ. ಇದನ್ನು ಸದಸ್ಯರಿಗೆ ತಿಳಿಸಲು ಅಶಿಸುತ್ತೇವೆ. ಅದರಿಂದ ಈ ಬಡಾವಣೆಯ ಸದಸ್ಯರುಗಳು ದಯಾಮಾಡಿ ನಿಗದಿ ಪಡಿಸಿರುವ ಈ ಮೊತ್ತವನ್ನು ಸಂಘಕ್ಕೆ ಸುಮಾರು 60 ದಿನದ ಒಳಗಾಗಿ ಹಣ ಪಾವತಿಸಿ ತಮ್ಮ ನಿವೇಶನವನ್ನು ಖಾಯಂ ಗೊಳಿಸಿಕೊಳ್ಳಬೇಕೆಂದು ಕಳ-ಕಳಿಯಿಂದ ಆಡಳಿತ ಮಂಡಳಿಯು ಮನವಿ ಮಾಡಿಕೊಳ್ಳುತ್ತೇವೆ. ಆಂದರೆ ತಮಗೆ ಈ ಹಿಂದೆ ತಾತ್ಕಾಲಿಕ ದರದಲ್ಲಿ ಹಣ ಪಾವತಿ ಮಾಡಿಕೊಂಡಿದ್ದು, ಅಂದರೆ ಒಂದು ಚದರ ಅಡಿಗೆ ರೂ. 265/- ಗಳಂತೆ ಸದಸ್ಯರಿಂದ ಪಡೆದಿದ್ದು, ಇದರಲ್ಲಿ ಕೆಲವು ಸದಸ್ಯರುಗಳು ಭಾಗಶ: ಹಣವನ್ನು ಸಂಘಕ್ಕೆ ಪಾವತಿಸಿದ್ದು, ಇದರ ವಿವರಣೆಯನ್ನು ತಮಗೆ ಈ ಪತ್ರದಲ್ಲಿ ನಮೂದಿಸಲಾಗಿದೆ. ಅಂತಿಮ ದರವು ಒಂದು ಚದರ ಆಡಿಗೆ ರೂ. 425/- ಗಳಾಗಿದ್ದು, ಇದರ ವಿವರಣೆಯು ಈ ರೀತಿ ಇರುತ್ತದೆ. ರೂ. 265/- ಗಳು ಮತ್ತು ಹೆಚ್ಚಳವಾದ ರೂ. 160/- ಗಳು ಸೇರಿ ಒಟ್ಟು ಒಂದು ಚದರ ಅಡಿಗೆ ರೂ. 425/- ಗಳು ಅಗಲಿದೆ. ಅದ್ದರಿಂದ ಮಾನ್ಯ ಸದಸ್ಯರುಗಳು ಇಲ್ಲಿಯ ತನಕ ಸಂಘಕ್ಕೆ ನಿಮ್ಮ ಸಹಕಾರ-ಸಲಹೆ ಇದೆ ರೀತಿ ನೀಡಿ ಸಂಘವನ್ನು ಉಳಿಸಿ-ಬೆಳಸಿಕೊಂಡು ಬಂದಿದಕ್ಕಾಗಿ ಸಂಘದ ಎಲ್ಲಾ ಸದಸ್ಯರಿಗೂ ನಾವು ಚಿರಋಣಿಯಾಗಿರುತ್ತೇವೆ, ಇನ್ನು ಮುಂದೆಯು ಇದೆ ರೀತಿ ತಮ್ಮ ಸಹಕಾರವನ್ನು ಸಂಘವು ಬಯಸುತ್ತದೆ.

**ವಿಶೇಷ ಸೂಚನೆ:** ಈ ಹಿಂದೆ ಸಂಘವು ತಾತ್ಕಾಲಿಕ ನಕ್ಷೆ ತಯಾರಿಸಿ, ತಮಗೆ ನಿವೇಶನವನ್ನು ನಿರ್ಮಿಸಿ, ಲಾಟರಿ ಮುಲಕ ನಿವೇಶನದ ಸಂಖ್ಯೆಯನ್ನು ಸಂಘದಿಂದ ನೀಡಿದ್ದು, ಆದರೆ ಈ ಸಮಯದಲ್ಲಿ ಸರ್ಕಾರದಿಂದ ಅಗಿರುವ ಹಲವಾರು ಮಾರ್ಪಾಡುಗಳಿಂದ ಅಂದರೆ 80 ಅಡಿ ರಸ್ತೆ, 60 ಅಡಿ ರಸ್ತೆ, ಮತ್ತು ರಿಂಗ್ ರಸ್ತೆ ನಮ್ಮ ಬಡಾವಣೆಯಲ್ಲಿ ಹಾದು ಹೋಗಿರುವುದರಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಾವು ಸಲ್ಲಿಸಿದ್ದ ನಕ್ಷೆಯನ್ನು ಬದಲಾಯಿಸಿ, ನಕ್ಷೆಯನ್ನು ಈಗ ಪುನ: ಮಾರ್ಪಾಡು ಮಾಡಿ ಪೂರ್ಣಗೊಳಿಸಿ ನಕ್ಷೆಯನ್ನು ಸಂಘಕ್ಕೆ ನೀಡಿರುವುದರಿಂದ ತಮಗೆ ಈ ಹಿಂದೆ ತಾತ್ಕಾಲಿಕ ನಕ್ಷೆಯಂತೆ ನಿವೇಶನ ನಿರ್ಮಿಸಿ ತಮಗೆ ಲಾಟರಿ ಮೂಲಕ ನೀಡಿರುವ ನಿವೇಶನ ಸಂಖ್ಯೆಯು ಬದಲಾಗಿದ್ದು, ಇಂದಿನ ಅನುಮೋದಿತ ನಕ್ಷೆಯ ಅನುಗುಣವಾಗಿ ಬಡಾವಣೆ ನಿರ್ಮಿಸಿ ಸದಸ್ಯರುಗಳಿಗೆ ಪುನ: ಲಾಟರಿ ಮುಲಕ ನಿವೇಶನ ಸಂಖ್ಯೆಯನ್ನು ನೀಡಲಾಗುವುದು ತಮಗೆ ತಿಳಿಪಡಿಸುತ್ತೇವೆ.

| ಅಳತೆ | 9X12 ಮೀ | 12X18 ಮೀ | 15X24 ಮೀ |
|---|---|---|---|
| ಈವರಿಗೂ ಪಾವತಿಸಿರುವ ಮೊತ್ತ | | | |
| ಬಾಕಿ ಪಾವತಿಸ ಬೇಕಾದ ಮೊತ್ತ | | | |

ವಂದನೆಗಳೊಂದಿಗೆ,

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

Shubha Kum. B.N.

ಕಾರ್ಯನಿರ್ವಹಣಾಧಿಕಾರಿ